ವಿತರಣಾ ಕಾಲುವೆ 54ರಲ್ಲಿ 2009–10ರ ಸಾಲಿನಲ್ಲಿ ಕಿ.ಮಿ. 0.0 ರಿಂದ 8.85ರವರೆಗಿನ ಕಾಮಗಾರಿಯನ್ನು ಶ್ರೀ ನಾಗಪ್ಪ ಡಿ. ವಡ್ಡರ ಪ್ರಥಮ ದರ್ಜೆ ಗುತ್ತಿಗೆದಾರರು ಸಾ: ವಜ್ಜಲ್ ತಾ: ಸುರಪುರ ಜಿ: ಯಾದಗಿರಿ ಇವರಿಗೆ ವಹಿಸಿಕೊಡಲಾಗಿರುತ್ತದೆ.

2010–11ನೇ ಸಾಲಿನಲ್ಲಿ ಕಿ.ಮಿ. 8.85 ರಿಂದ 13.00ರವರೆಗಿನ ಕಾಮಗಾರಿಯನ್ನು ಶ್ರೀ ಎಂ.ವೈ. ಕಟ್ಟಿಮನಿ ಪ್ರಥಮ ದರ್ಜೆ ಗುತ್ತಿಗೆದಾರರು, 148/6–1, ಐದನೇ ಕ್ರಾಸ್ ಆರ್.ಎಂ.ವಿ. ಎಕ್ಸ್‌ಟೆನ್‌ಷನ್, ಸದಾಶಿವನಗರ ಬೆಂಗಳೂರು–80 ಇವರಿಗೆ ವಹಿಸಿಕೊಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಕೃಷಿ ಭೂಮಿಗೆ ಶಾಶ್ವತ ನೀರಾವರಿ

341 (668) ಶ್ರೀ ನರಸಿಂಹಸ್ವಾಮಿ .ಜೆ (ದೊಡ್ಡಬಳ್ಳಾಪುರ): ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕಿನ ಕೃಷಿ ಭೂಮಿಗೆ ನೀರುಣಿಸಲು ನೀರಾವರಿ ಯೋಜನೆಗಳ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಮೇಲ್ಕಂಡ ಕೃಷಿ ಭೂಮಿಗೆ ನೀರಾವರಿ ಯೋಜನೆ ಕಲ್ಪಿಸಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕೃಷಿ ಭೂಮಿಗೆ ನೀರಾವರಿ ಕಲ್ಪಿಸಲು ಹಾಲಿ ಇರುವ ಕೆರೆಗಳ ದುರಸ್ತಿ, ಜೀರ್ಣೋದ್ಧಾರ ಹಾಗೂ ಪುನರುಜ್ಜೀವನ ಮತ್ತು ನಬಾರ್ಡ್ ಸಾಲದೊಂದಿಗೆ ಹಂತ ಹಂತವಾಗಿ ಕೆರೆಯ ಅಂಗಳದಲ್ಲಿ ಮತ್ತು ಪೋಷಕ ಕಾಲುವೆಗಳ ಹೂಳೆತ್ತುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಹೊಸ ನೀರಾವರಿ ಕ್ಷೇತ್ರವನ್ನು ವಿಶೇಷ ಘಟಕ ಯೋಜನೆ–ಗಿರಿಜನ ಉಪ ಯೋಜನೆಯಡಿ ಕೈಗೆತ್ತಿಕೊಳ್ಳಲಾಗುತ್ತಿದೆ.